ಪ್ರಬಂಧ

ಸುದೀರ್ಘ ಪೂಜೆ ಸೇರಿಸಿದರೆ ಒಟ್ಟು ಆರು ಗಂಟೆಯ ಲೆಕ್ಕ ಹಿಡಿಯಬಹುದು. ಆಗ ಮನೆಯಲ್ಲಿ ಭಜನೆ ಬರುವ ಚಾನಲ್ಲೇ ಹಚ್ಚಬೇಕು. ಗಂಡ ಇಲ್ಲವೇ ಮಗ ಆ ಸಮಯದಲ್ಲಿ ಕ್ರಿಕೆಟು, ಸೀರಿಯಲ್ಲು ಅಂತ ಕುಂತರೆ ಅವರ ಗ್ರಹಚಾರ ನೆಟ್ಟಗಿರುವುದಿಲ್ಲ.

ನಾನು ಬೆಳಗ್ಗೆ ಗೆಳೆಯನ ಮನೆಗೆ ತಲುಪಿದಾಗ ಜಯಮ್ಮ ಅಡುಗೆಮನೆಯಲ್ಲಿದ್ದರು. ನನ್ನ ಕಂಡವರೆ, "ಬನ್ರಿ ಅಣ್ಣಾರೆ, ಕುತ್ಕೊಳ್ರಿ ಟೀ ಮಾಡ್ತೀನಿ" ಎಂದರು. "ಗಟ್ಟಿ ಹಾಲಿಗೆ ಟೀ ಪುಡಿ ಹಾಕಿ ಮಾಡಿದ್ರಷ್ಟೆ ಕುಡೀತಿನಿ. ಸಕ್ಕರೆ ಹಾಕ್ಬೇಡಿ" ಎಂದು ಶರತ್ತು ಹಾಕಿದೆ. "ನೀರ್‌ಟೀ ನಾನ್ಯಾವಗ್ರಿ ಮಾಡ್ಕೊಟ್ಟಿದ್ದೀನಿ ನಿಮ್ಗೆ? ನಿಮ್ ಜಾತಿ ಬೂವಮ್ಮನೇ ಹಾಲು ಕೊಡೋದು" ಎಂದರು. "ಯಾವ ಜಾತೀರು ಕೊಟ್ರೇನು? ಹಾಲು ಗಟ್ಟಿ ಇರ್ಬೇಕು, ಅದು ಮುಖ್ಯ ಅಲ್ವೆ?" ಎಂದೆ. "ನಾನೂ ನೂರು ಸತಿ ಹೇಳಿದೀನಿ ಆಯಮ್ಮನಿಗೆ ಅಣ್ಣರೆ. ಹಾಲಿಗೆ ನೀರು ಹೊಯ್ಯಬ್ಯಾಡೆ ಮಾರಾಯ್ತಿ ಅಂತ. ಕೇಳಿದ್ರೆ ಎಮ್ಮೆ ಮುಸುರೆ ನೀರು ಜಾಸ್ತಿ ಕುಡಿಯೋ ಹೊತ್ತಿಗೆ ಹಾಲು ತೆಳ್ಳಗೆ ನೀರ್ ನೀರಾಗುತ್ತೆ ಅಕ್ಕಯ್ಯ ಅಂತ ಹೇಳ್ತಾಳೆ. ಎಮ್ಮೆ ನೀರು ಹೆಚ್ಚೆ ಕುಡುದ್ರೆ ಹಂಗಾಗುತ್ತೇನ್ರಿ?'' ಎಂದು ನನಗೇ ಪಾಟಿ ಸವಾಲು ಎಸೆದರು. ಉತ್ತರ ಗೊತ್ತಿಲ್ಲದ ನಾನು ಕಕ್ಕಾಬಿಕ್ಕಿ.

ಆಗಷ್ಟೇ, ಅವರ ಮಗಳು ಪಿಂಕಿ ಕಾಲೇಜಿಗೆ ಹೋಗಲು ರೆಡಿಯಾಗಿ ತಿಂಡಿಗಾಗಿ ತಟ್ಟೆ ಹಿಡಿದು ಕಾಯುತ್ತಿದ್ದಳು. ಒಳಗೆ ಜಯಮ್ಮ ದೋಸೆ ಹೊಯ್ಯುತ್ತಿದ್ದರು. ದೋಸೆ ಜಯಮ್ಮನ ಮಾತು ಕೇಳುತ್ತಿರಲಿಲ್ಲ. ಹೆಂಚು ಕೂಡ ತನ್ನ ಕರ್ತವ್ಯವನ್ನು ಸರಿಯಾಗಿ ನಿಭಾಯಿಸುತ್ತಿರಲಿಲ್ಲ. ಇದರಿಂದ ಜಯಕ್ಕ ಕೊಂಚ ವ್ಯಗ್ರರಾಗಿದ್ದರು. ಡೈನಿಂಗ್ ಟೇಬಲ್ಲಿನ ಮುಂದೆ ಕೂತು, ''ಲೇಟಾಯಿತು ಮಮ್ಮಿ'' ಚಡಪಡಿಸುತ್ತಿದ್ದ ಪಿಂಕಿಯ ಗೊಣಗಾಟವೂ ಅವರಿಗೆ ಕಿರಿಕಿರಿ ತಂದಿತ್ತು. "ಏಯ್ ಬಡ್ಕೋಬ್ಯಾಡ ತಡಿಯೇ!" ಎಂದು ಗುಟುರಿಕೆ ಒಗೆಯುತ್ತಿದ್ದರು. ತನ್ನ ಪಾಡಿಗೆ ಮರ್ಯಾದೆಯಿಂದ ಬೆಂದು ಮೇಲೇಳದ ದೋಸೆಯನ್ನು ಚುಂಚಕದಿಂದ ತಿವಿದು ಸಾಯಿಸಿ, ಖಂಡತುಂಡು ಮಾಡಿಕೊಂಡು ತಂದು ಪಿಂಕಿ ಪ್ಲೇಟಿಗೆ ಎಸೆಯಲು ಹೋದರು. ಆದರೆ ಅಂಟಾಗಿ, ಗಂಟಾಗಿ, ರಗಳೆ ರಾದ್ಧಾಂತವಾಗಿದ್ದ ದೋಸೆ ಮಾತ್ರ ಚುಂಚುಕದ ಹಿಡಿತದಿಂದ ಕೆಳಗೆ ಇಳಿಯಲೇ ಇಲ್ಲ. ರಪರಪ ತಟ್ಟೆಯ ಮೇಲೆ ಬಡಿದಾದ ಮೇಲೆಯೇ ಅದು ಮುದ್ದೆಯಂತಾಗಿ ತಟ್ಟೆಗೆ ವಕ್ಕರಿಸಿತು. ಮೊದಲೇ ಮುಖ ಸಿಂಡರಿಸಿಕೊಂಡು ಕುಂತಿದ್ದ ಪಿಂಕಿ, "ನನಗಿದು ಬೇಡ, ನಾನು ಕ್ಯಾಂಟೀನಿನಲ್ಲಿ ಮ್ಯಾಗಿ ತಿಂತಿನಿ" ಎಂದು ಹಠಾತ್ತನೆ ಎದ್ದಳು. "ಚುಂಚ್ಕದಲ್ಲೇ ಮೂತಿಗೆ ಇಕ್ತಿನಿ ನೋಡು, ತಿನ್ನೇ" ಎಂದು ಗುರಾಯಿಸಿದರು.

ಮರುಕ್ಷಣಕ್ಕೆ ಪ್ರೀತಿ ತುಂಬಿಕೊಂಡು, "ಅಷ್ಟೊಂದು ಕಷ್ಟಪಟ್ಟು ಮಾಡಿದ್ದೀನಿ ತಿನ್ನವ್ವ" ಜಯಮ್ಮನ ಸಾಂತ್ವನ. "ಇದನ್ನ ಯಾರಾದರೂ ದೋಸೆ ಅಂತಾರಾ? ಅಕ್ಕಿ ಮುದ್ದೆ ತರ ತಂದು ಕುಕ್ಕಿದ್ದೀಯಲ್ಲ ನಾ ತಿನ್ನಲ್ಲ" ಪಿಂಕಿಯ ಹಟ. "ನಿಮ್ಮಪ್ಪ ತರೋ ಅಕ್ಕಿ ಸರಿಯಿಲ್ಲ. ಗ್ಯಾಸ್ ಒಲೆ ನೆಟ್ಟಗಿಲ್ಲ. ದ್ವಾಸೆ ಹಂಚು ಇವರಮ್ಮನ ಕಾಲದ್ದು. ನಾ ಏನ್ ಮಾಡಿ ಸಾಯ್ಲಿ. ಸುಮ್ನೆ ತಿನ್ನು. ಹೊಟ್ಟೆಗೆ ಹೋದ್ಮೆಲೆ ದ್ವಾಸೆ ಆದ್ರೇನು? ಇಡ್ಲಿ, ಉಪ್ಪಿಟಾದ್ರೇನು? ಎಲ್ಲಾ ಹಿಂಗೆ ಕಲಸಿ ಉಂಡೇನೇ ಆಗದು. ದೋಸೆ ಅಗಲಕ್ಕೇ ಹರಡ್ಕೊಂಡೇ ಇರ್ಬೇಕು ಅಂತ ರೂಲ್ಸು ಏನಾದ್ರೂ ಇದೆಯಾ? ಅಣ್ಣಾರೆ" ಎಂದು ಮತ್ತೆ ನನಗೆ ಪ್ರಶ್ನೆ ಎಸೆದರು. ನಾನು ಕಳ್ಳ ಮೌನಿಯಾದೆ. ಪಿಂಕಿಗೆ ಅವಮಾನವಾದಂತಾಗಿ ಎದ್ದೇ ಹೊರಟಳು. "ನನ್ನ ಅಡುಗೆ ಅಂದ್ರೆ ತಾತ್ಸಾರ ಇವಕ್ಕೆ. ಯಾರೋ ಆಗದವರು ಮಾಟ ಮಾಡ್ತಿದ್ದಾರೆ. ಅದಕ್ಕೆ ಇವ್ವು ಹಿಂಗಾಡೋದು. ಎಲ್ಲಾ ನನ್ನ ಗ್ರಹಚಾರ. ಹೋಗ್ಲಿ ದೇವರಿಗೆ ಕೈ ಮುಗಿದು ಹೋಗು. ಅದೇ ಮ್ಯಾಗಿನೋ ಜೋಗಿನೋ ತಿಂದು ಸಾಯಿ. ಹೋಗ್ಬೇಕಾದ್ರೆ ಪೂರ್ವ ದಿಕ್ಕಿನ ರಸ್ತೆ ಕಡಿಂದಲೇ ಹೋಗು, ಒಳ್ಳೇದಾಗುತ್ತಂತೆ. ಅನಿಷ್ಟ ದಕ್ಷಿಣ ದಿಕ್ಕಿಗೆ ಹೋಗ್ಬೇಡ" ಎಂದು ಕೂಗಿ ಹೇಳಿದರು. ಅವಳು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ.

ಈ ಮಾಮೂಲಿ ಜಗಳ ಕೇಳಿದ್ದೇ ಒಳಗಿದ್ದ ಯಜಮಾನ ಗುಡ್ಡಪ್ಪ ಹಾರಿ ಸೋಫಾಕ್ಕೆ ಬಂದ. ಮುದ್ದಿನ ಮಗಳು ತಿನ್ನದೆ ಹೊರಟಿದ್ದು ಅವನಿಗೆ ಬೇಸರ. "ಅಲ್ಲೇ ರೇಷನ್ನೇ ಸರಿ ಇಲ್ಲ ಅಂತಿಯಲ್ಲ. ನಾನೇನಾದ್ರೂ ಬೆಳೆದು ತರ್ತಿದ್ದೀನಾ? ನೀ ಹೇಳಿದ ಅಂಗಡೀಲೆ ಅಲ್ವೇನೆ ತರೋದು. ನಿಂಗೆ ನೆಟ್ಟಗೆ ಮಾಡಕ್ಕೆ